# ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ

## ಫೌಜುದಾರಿ ಪ್ರಕರಣ ಸಂಖ್ಯೆ: 54/2023

| | |
|---|---|
| ಫಿರ್ಯಾದಿಃ | ಸರಕಾರದ ಪರವಾಗಿ<br>ಪೋಲಿಸ್ ವೃತ್ತ ನಿರೀಕ್ಷಕರು,<br>ಹೊನ್ನಾವರ ವಲಯ, ಹೊನ್ನಾವರ. |
| | –ವಿರುದ್ಧ– |
| ಆರೋಪಿಃ | ಹನುಮಂತ ತಂದೆ ತೊಲೆಪ್ಪ ಕೊಂಚಿಕೊರವರ,<br>ವಯಸ್ಸುಃ24 ವರ್ಷಗಳು,<br>ಉದ್ಯೋಗಃ ಗಾರೆಕೆಲಸ,<br>ಸಾಕೀನಃ ಸಮಗಾರ ಓಣಿ, ಮೀನು ಮಾರ್ಕೆಟ ಹತ್ತಿರ,<br>ಲಕ್ಷ್ಮೇಶ್ವರ, ಜಿಲ್ಲೆಃ ಗದಗ. |

## ದೋಷಾರೋಪಣೆ

ಶ್ರೀ ಬಿ.ಸಿ. ಚಂದ್ರಶೇಖರ್ ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡ ದೋಷಾರೋಪಣೆಗಳನ್ನ ಹೊರಿಸುತ್ತಿದ್ದೇನೆ.

1. ಮೊದಲನೇಯದಾಗಿ ದಿನಾಂಕ 05-03-2023 ರಂದು ಮಧ್ಯಾಹ್ನ ಸುಮಾರು 01-30 ಗಂಟೆಯ ಸಮಯಕ್ಕೆ ಹೊನ್ನಾವರ ಪೋಲಿಸ್ ಠಾಣಾ ಸರಹದ್ದಿನಲ್ಲಿರುವ ಹೊನ್ನಾವರ ತಾಲೂಕಿನ ದಿಬ್ಬಣಗಲ್ ಹಗೇರಮಕ್ಕಿಯಲ್ಲಿರುವ ಚಾಸಾ-1 ಶ್ರೀಮತಿ ವೈಲೇಟ್ ಫೇಮಿನಾರವರ ವಾಸದ ಮನೆಯಲ್ಲಿ ಯಾರು ಇಲ್ಲದ ವೇಳೆಯಲ್ಲಿ ಆರೋಪಿಯು ಅವರ ಮನೆಯ ಮೇಲ್ಛಾವಣಿಯ ಹಂಚನ್ನು ತೆಗೆದು ಗುಹಾತಿಕ್ರಮಣ ಮಾಡಿ ಭಾರತೀಯ ದಂಡ ಸಂಹಿತೆ ಕಲಂ 454 ರಡಿ ಅಪರಾಧ ಎಸಗಿರುತ್ತಿರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ.

2.ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯು ಮೇಲೆ ಹೇಳಿದ ರೀತಿಯಲ್ಲಿ ಕಳ್ಳತನ ಮಾಡುವ ಉದ್ದೇಶದಿಂದ ಮನೆಯಾಳಗೆ ಅತಿಕ್ರಮ ಪ್ರವೇಶ ಮಾಡಿ ಸದರಿ ಮನೆಯ ಹಾಲದಲ್ಲಿದ್ದ ಟಿ.ವಿ. ಎದುರಿಗೆ ಟೆಬಲ್ ಮೇಲೆ ಇಟ್ಟಿದ್ದ ರೂ.2,500-00 ನಗದು ಹಣವನ್ನು ಕಳ್ಳತನ ಮಾಡಿಕೊಂಡು ಹೋಗಿ ಖರ್ಚು ಮಾಡಿರುವುದಲ್ಲದೇ ಮತ್ತು ಚಾಸಾ-9 ರವರ ಬಜಾಜ ಕಂಪನಿಯ ಡಿಸ್ಕವರ ಮಾದರಿಯ ಕಪ್ಪು ಮತ್ತು ಕೆಂಪು ಬಣ್ಣದ ಮೋಟಾರು ಸೈಕಲ್ ಸಂಖ್ಯೆಕೆಎ-15/ವೈ-2465 ಇದರ ಚೆಸ್ಸಿಸ್ ಸಂಖ್ಯೆMD2A15BZ8GWG02496, ಎಂಜಿನ್ ಸಂಖ್ಯೆJZZWGF45907 ನ್ನ

ದಿನಾಂಕಃ 03-03-2023 ರಂದು ರಾತ್ರಿ ಸಾಗರ ಪೋಲಿಸ್ ವ್ಯಾಪ್ತಿಯ ಖುಲ್ಲಾ ಸ್ಥಳದಲ್ಲಿ ಇಟ್ಟಿದ್ದನ್ನು ಕಳ್ಳತನ ಮಾಡಿಕೊಂಡು ಬಂದು ಹೊನ್ನಾವರ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಸಿಕ್ಕ ನೀವು ಭಾರತೀಯ ದಂಡ ಸಂಹಿತೆ ಕಲಂ 379 ಮತ್ತು 380 ರಡಿಯಲ್ಲಿ ಅಪರಾಧ ಎಸಗಿರುತ್ತಿರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ.

ಮೇಲಿನ ಆಪಾದನೆಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ನಿರ್ದೇಶಿಸುತ್ತಿದ್ದೇನೆ.

**ಸಹಿ ಇದೆ.**

ದಿನಾಂಕಃ 22-08-2024

ಸ್ಥಳಃ ಹೊನ್ನಾವರ

**(ಶ್ರೀ ಬಿ.ಸಿ. ಚಂದ್ರಶೇಖರ್)**
**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ.**

**<u>ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ</u>**

**<u>ಫೌಜುದಾರಿ ಪ್ರಕರಣ ಸಂಖ್ಯೆ 54/2023</u>**

| | |
|---|---|
| ಫಿರ್ಯಾದಿಃ | ಸರಕಾರದ ಪರವಾಗಿ<br>ಪೋಲಿಸ್ ವೃತ್ತ ನಿರೀಕ್ಷಕರು,<br>ಹೊನ್ನಾವರ ವಲಯ , ಹೊನ್ನಾವರ. |

**-ವಿರುದ್ಧ-**

| | |
|---|---|
| ಆರೋಪಿಃ | ಹನುಮಂತ ತಂದೆ ತೊಲೆಪ್ಪ ಕೊಂಚಿಕೊರವರ,<br>ವಯಸ್ಸುಃ24 ವರ್ಷಗಳು,<br>ಉದ್ಯೋಗಃ ಗಾರೆಕೆಲಸ,<br>ಸಾಕೀನಃ ಸಮಗಾರ ಓಣಿ, ಮೀನು ಮಾರ್ಕೆಟ ಹತ್ತಿರ,<br>ಲಕ್ಷ್ಮೇಶ್ವರ, ಜಿಲ್ಲೆಃ ಗದಗ. |

**<u>ಆಪಾದನೆ</u>**

ಪ್ರಶ್ನೆ1. ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆಗಳನ್ನ ಕೇಳಿದಿರಾ? ಅದು ನಿಮಗೆ ತಿಳಿಯಿತೆ?

**ಉತ್ತರಃ**

ಪ್ರಶ್ನೆ2. ನೀವು ಸದ್ರಿ ದೋಷಾರೋಪಣೆಗಳನ್ನ ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

**ಉತ್ತರಃ**

(ಸದರಿ ದೋಷಾರೋಪಣೆಗಳನ್ನ ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಪ್ರಶ್ನೆಗಳನ್ನ ಸಹ ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಿ ಹೇಳಿ ಆರೋಪಿಯು ನೀಡಿದ ಉತ್ತರಗಳನ್ನ ನನ್ನ ಸ್ವಹಸ್ತಾಕ್ಷರಗಳಿಂದ ಬರೆದುಕೊಳ್ಳಲಾಗಿರುತ್ತದೆ)

**ಸಹಿ ಇದೆ.**

ದಿನಾಂಕಃ 22-08-2024

ಸ್ಥಳಃ ಹೊನ್ನಾವರ

**(ಶ್ರೀ ಬಿ.ಸಿ. ಚಂದ್ರಶೇಖರ್)**
**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ.**